# ಮತಾಂತರ

# ಮತ್ತು ಮತಾಂತರಿತರ ಶುದ್ಧೀಕರಣ

## ಮನೋಗತ

ಹಿಂದೂಸ್ಥಾನ ಮತ್ತು ಹಿಂದೂ ಧರ್ಮದ ಮೇಲೆ ಕೆಲವು ಶತಮಾನಗಳಿಂದ ಇತರ ಧರ್ಮೀಯರಿಂದಾಗುತ್ತಿರುವ ಧಾರ್ಮಿಕ ಆಕ್ರಮಣದ ಸಮಸ್ಯೆಯೇ ಮತಾಂತರ !

ಇತಿಹಾಸದಲ್ಲಿ ಅರಬರಿಂದ ಆಂಗ್ಲರವರೆಗೆ ಅನೇಕ ಪರಕೀಯರು ಹಿಂದೂಸ್ಥಾನದ ಮೇಲೆ ಆಕ್ರಮಣ ನಡೆಸಿದ್ದಾರೆ. ಅವರ ಸಾಮ್ರಾಜ್ಯದ ವಿಸ್ತರಣೆ ಮತ್ತು ತಮ್ಮ ಧರ್ಮದ ಪ್ರಸಾರವೇ ಈ ಆಕ್ರಮಣಗಳ ಮೂಲ ಉದ್ದೇಶವಾಗಿತ್ತು. ಇಂದಿಗೂ ಈ ಪರಕೀಯರ ವಾರಸುದಾರರು ಅದೇ ಧ್ಯೇಯವನ್ನಿಟ್ಟುಕೊಂಡು ಹಿಂದೂಸ್ಥಾನದಲ್ಲಿ ಆಯೋಜನಾಬದ್ಧವಾಗಿ ಕಾರ್ಯನಿರತರಾಗಿದ್ದಾರೆ. ಮುಸಲ್ಮಾನರು 'ಲವ್ ಜಿಹಾದ್' ಮೂಲಕ ರಾಷ್ಟ್ರವನ್ನು ನಾಶಗೊಳಿಸುತ್ತಿದ್ದಾರೆ. ಕ್ರೈಸ್ತರು ಮತಾಂತರದ ಮೂಲಕ ಹಿಂದೂ ಧರ್ಮವನ್ನು ನಾಶಗೊಳಿಸುತ್ತಿದ್ದಾರೆ. ಧರ್ಮಶಿಕ್ಷಣವಿಲ್ಲದ್ದರಿಂದ ಧರ್ಮಾಭಿಮಾನರಹಿತ ಹಿಂದೂ ಸಮಾಜವು ಅದಕ್ಕೆ ಬೃಹತ್ ಪ್ರಮಾಣದಲ್ಲಿ ಬಲಿಯಾಗುತ್ತಿದೆ. 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ।', ಅಂದರೆ 'ಪರಧರ್ಮವನ್ನು ಸ್ವೀಕರಿಸುವುದಕ್ಕಿಂತ, ಸ್ವಧರ್ಮವನ್ನು ಆಚರಿಸುವಾಗ ಮೃತ್ಯು ಬಂದರೂ ಅದು ಶ್ರೇಷ್ಠವಾಗಿದೆ', ಎಂಬ ತತ್ತ್ವವನ್ನು ಶ್ರೀಮದ್ಭಗವದ್ಗೀತೆಯಲ್ಲಿ ಹೇಳಲಾಗಿದೆ. 'ನೀರಿನಲ್ಲಿರುವ ಮೀನು ತುಪ್ಪದೊಳಗೆ ಬಿದ್ದರೂ ಅದರ ಮೃತ್ಯು ಶತಃಸಿದ್ಧವಾಗಿದೆ, ಹಾಗೆಯೇ ಸ್ವಧರ್ಮವನ್ನು ತ್ಯಜಿಸಿ ಪರಧರ್ಮದ ಸ್ವೀಕಾರವೆಂದರೆ ಮೃತ್ಯುವನ್ನು ಸ್ವೀಕರಿಸಿದಂತೆಯೇ ಆಗಿದೆ', ಎಂಬುದನ್ನು ಹಿಂದೂಗಳು ಗಮನದಲ್ಲಿಡುವುದು ಆವಶ್ಯಕವಾಗಿದೆ.

ಹಿಂದೂ ಸಮಾಜವನ್ನು ಮತಾಂತರಿಸುವ ಅಹಿಂದೂಗಳ ಆಯೋಜನಾಬದ್ಧ ಷಡ್ಯಂತ್ರ, ಅದಕ್ಕಾಗಿ ಅವರಿಗೆ ವಿದೇಶಗಳಿಂದ ದೊರೆಯುವ ಆರ್ಥಿಕಸಹಾಯ, ಮತಾಂತರದಿಂದಾಗುವ ಸಾಮಾಜಿಕ, ಸಾಂಸ್ಕೃತಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಣಾಮ ಮುಂತಾದ ವಿಷಯಗಳ ಬಗ್ಗೆ ಈ ಗ್ರಂಥದಲ್ಲಿ ಸವಿಸ್ತಾರವಾದ ವಿವೇಚನೆಯನ್ನು ಮಾಡಲಾಗಿದೆ. ಹಾಗೆಯೇ ಆಯೋಜನಾಬದ್ಧ ಮತಾಂತರದ ಕಾರಸ್ಥಾನವನ್ನು ತಡೆಗಟ್ಟಲು ಹಿಂದೂ ಸಮಾಜ, ಹಿಂದುತ್ವವಾದಿ ಸಂಘಟನೆಗಳು ಮತ್ತು ಕೇಂದ್ರ ಸರಕಾರವು ಮಾಡಬೇಕಾದ ಪರಿಹಾರೋಪಾಯಗಳನ್ನೂ ಈ ಗ್ರಂಥದಲ್ಲಿ ವಿವರಿಸಲಾಗಿದೆ. 'ಶುದ್ಧೀಕರಣ' ಪ್ರಕ್ರಿಯೆಯ ಬಗೆಗಿನ ವಿಷಯವನ್ನು ಈ ಗ್ರಂಥದಲ್ಲಿ ಸ್ವತಂತ್ರ ಅಧ್ಯಾಯದಲ್ಲಿ ಸಮಾವೇಶಗೊಳಿಸಲಾಗಿದೆ.

ಕುಂಭಕರ್ಣನು ವರ್ಷದಲ್ಲಿ ಆರು ತಿಂಗಳು ಮಾತ್ರ ನಿದ್ರಿಸುತ್ತಿದ್ದನು; ಆದರೆ ಮತಾಂತರದ ಸಮಸ್ಯೆಯ ವಿಷಯದಲ್ಲಿ ಹಿಂದೂ ಸಮಾಜರೂಪಿ ಕುಂಭಕರ್ಣನು ನೂರಾರು ವರ್ಷಗಳಿಂದ ನಿದ್ರೆಯಲ್ಲಿದ್ದಾನೆ. ಈ ಗ್ರಂಥವನ್ನು ಓದಿ ಸಂಪೂರ್ಣ ರಾಷ್ಟ್ರವನ್ನು ವ್ಯಾಪಿಸಿರುವ ಮತಾಂತರದ ಸಮಸ್ಯೆಯ ಬಗ್ಗೆ ಹಿಂದೂ ಸಮಾಜವು ಜಾಗೃತವಾಗಬೇಕು ಮತ್ತು ಅದು ಪರಕೀಯರ ಮತಾಂತರದ ಆಕ್ರಮಣವನ್ನು ಹೊಡೆದೋಡಿಸಬೇಕು, ಎಂಬುದೇ ಈಶ್ವರನ ಚರಣಗಳಲ್ಲಿ ಪ್ರಾರ್ಥನೆ !

# ಅನುಕ್ರಮಣಿಕೆ

**ಪ್ರಕರಣ ೧ : ಮತಾಂತರದ ಸಮಸ್ಯೆಗಳು** ೬

೧. ಅರ್ಥ ಮತ್ತು ಸಮಾನಾರ್ಥ ಶಬ್ದಗಳು ೬

೨. ಮತಾಂತರದ ಸಾಮಾನ್ಯ ವಿಧಗಳು ೬

೩. ಹಿಂದೂಸ್ಥಾನದ ಮತಾಂತರದ ಇತಿಹಾಸ ೬

೪. ಹಿಂದೂಗಳನ್ನು ಮತಾಂತರಿಸುವುದರ ಹಿಂದಿನ ಅಹಿಂದೂಗಳ ಉದ್ದೇಶ ! ೧೩

೫. ಹಿಂದೂಗಳ ಮತಾಂತರದ ವ್ಯಾಪ್ತಿ ೧೪

೬. ಮತಾಂತರವಾಗುವುದರ ಹಿಂದಿನ ಹಿಂದೂಗಳಲ್ಲಿರುವ ದೋಷಗಳು ೨೧

೭. ಮತಾಂತರದ ನಂತರ ಹಿಂದೂಗಳಿಗಾಗುವ ತೊಂದರೆಗಳ ಕೆಲವು ಉದಾಹರಣೆಗಳು ೨೨

೮. ಮತಾಂತರದ ದುಷ್ಪರಿಣಾಮಗಳು ೨೩

೯. ಆಧ್ಯಾತ್ಮಿಕ ದೃಷ್ಟಿಯಿಂದ ಮತಾಂತರಿಸುವುದು ಅಯೋಗ್ಯವಾಗಿದೆ ! ೨೯

೧೦. ಸಂವಿಧಾನದ ೨೫ ನೇ ಪರಿಚ್ಛೇದ ಮತ್ತು ಮತಾಂತರ ೩೦

೧೧. ಹಿಂದೂ ಸಮಾಜಕ್ಕೆ ಕರೆ ೩೧

೧೨. ಹಿಂದುತ್ವವಾದಿ ಸಂಘಟನೆಗಳಿಗೆ ಕರೆ ೩೨

೧೩. ಮತಾಂತರವನ್ನು ತಡೆಗಟ್ಟುವ ಉಪಾಯಗಳು ೩೩

೧೪. ಧರ್ಮಾಧಿಷ್ಠಿತ ಹಿಂದೂರಾಷ್ಟ್ರದಲ್ಲಿ ಹಿಂದೂಗಳ ಮತಾಂತರಕ್ಕೆ ನಿರ್ಬಂಧವಿರುವುದು ! ೩೭

**卐 ಮತಾಂತರಕ್ಕೆ ಅನುಕೂಲವಾಗಿರುವ ಅಯೋಗ್ಯ ವಿಚಾರ ಹಾಗೂ ಟೀಕೆ ಮತ್ತು ಅವುಗಳ ಖಂಡನೆ** ೩೮

**ಪ್ರಕರಣ ೨ : ಮತಾಂತರಿತರ ಶುದ್ಧೀಕರಣ** ೪೦

೧. ವ್ಯಾಖ್ಯೆ ೪೦

೨. ಶುದ್ಧೀಕರಣದ ಬಗ್ಗೆ ಧರ್ಮಶಾಸ್ತ್ರ ಏನು ಹೇಳುತ್ತದೆ ? ೪೦

೩. ಶುದ್ಧೀಕರಣದ ವಿವಿಧ ಪದ್ಧತಿಗಳು ಮತ್ತು ವಿಧಿಗಳು ೪೧

೪. ಮತಾಂತರವನ್ನು ಮಾಡಿ ಹಿಂದೂ ಆಗಿರುವವರಿಗೆ ಸಾಧನೆಯ ಮಾರ್ಗ ೪೨

೫. ಶುದ್ಧೀಕರಣದ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಸಂದೇಹ ನಿವಾರಣೆ ! ೪೩

೬. ಹಿಂದೂ ಸಮಾಜಕ್ಕೆ ಕರೆ ೪೪